# ತುಳು ನವ್ಯ ರಂಗಭೂಮಿಯ ಪ್ರವರ್ತಕ ಮನು ಇಡ್ಯಾ

**ರವಿರಾಜ್ ಎಸ್.***

**DOI: https://doi.org/10.5281/zenodo.22108108**

**ABSTRACT**

ತುಳು ರಂಗಭೂಮಿಯು ಕೇವಲ ಮನರಂಜನೆ, ಹಾಸ್ಯ ಹಾಗೂ ಪೌರಾಣಿಕ ಕಥೆಗಳಿಗೆ ಸೀಮಿತವಾಗಿದ್ದ ಕಾಲದಲ್ಲಿ, ಅದಕ್ಕೆ 'ನವ್ಯ' ಸ್ಪರ್ಶ ನೀಡಿದ ಶ್ರೇಯಸ್ಸು ಮನು ಇಡ್ಯಾ ಅವರಿಗೆ ಸಲ್ಲುತ್ತದೆ. ಅವರು ತಮ್ಮ 'ಮಾರಿ ಗಿಡಪ್ಪುಲೆ', 'ತಿರ್ಸಂಕು', ಮತ್ತು 'ಬಲಿ'ಯಂತಹ ನಾಟಕಗಳ ಮೂಲಕ ಸಮಾಜದ ಮೂಢನಂಬಿಕೆ, ಜಾತಿ ತಾರತಮ್ಯ ಹಾಗೂ ಶೋಷಣೆಯನ್ನು ಅತ್ಯಂತ ತೀಕ್ಷ್ಣವಾಗಿ ಪ್ರಶ್ನಿಸಿದರು. ಅದ್ದೂರಿ ರಂಗಸಜ್ಜಿಕೆಯ ಬದಲು ಬೆಳಕು–ನೆರಳಿನ ತಂತ್ರ, ಕಾವ್ಯಾತ್ಮಕ ಹಾಗೂ ಹರಿತವಾದ ಭಾಷೆ ಮತ್ತು ಪ್ರಬಲ ರೂಪಕಗಳನ್ನು ಬಳಸುವ ಮೂಲಕ ಪ್ರೇಕ್ಷಕರನ್ನು ಚಿಂತನೆಗೆ ಹಚ್ಚಿದರು. ಕೇವಲ ಬಾಹ್ಯ ಸನ್ನಿವೇಶಗಳಿಗಿಂತ ಮನುಷ್ಯನ ಅಂತರಂಗದ ಸಂಘರ್ಷಗಳನ್ನು ಹಾಗೂ ಬಂಡಾಯದ ಧ್ವನಿಯನ್ನು ರಂಗದ ಮೇಲೆ ತಂದ ಇವರು, ತುಳು ನಾಟಕ ಕ್ಷೇತ್ರವನ್ನು ಸಾಂಪ್ರದಾಯಿಕತೆಯಿಂದ ಬಿಡಿಸಿ ವೈಚಾರಿಕ ಎತ್ತರಕ್ಕೆ ಕೊಂಡೊಯ್ದರು. ಈ ಅದ್ಭುತ ಪ್ರಯೋಗಶೀಲತೆಯಿಂದಾಗಿಯೇ ಅವರನ್ನು ತುಳು ನವ್ಯ ರಂಗಭೂಮಿಯ ಪ್ರವರ್ತಕರೆಂದು ಗುರುತಿಸಲಾಗುತ್ತದೆ.

**KEYWORDS:** ತುಳು ನವ್ಯ ರಂಗಭೂಮಿ, ಮನು ಇಡ್ಯಾ, ವೈಚಾರಿಕತೆ, ಸಾಮಾಜಿಕ ಬಂಡಾಯ, ರಂಗ ಪ್ರಯೋಗ.

* **ರವಿರಾಜ್ ಎಸ್.,** ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ, ಬೆಸೆಂಟ್ ಮಹಿಳಾ ಕಾಲೇಜು, ಕೊಡಿಯಾಲ್‌ಬೈಲ್, ಮಂಗಳೂರು.

ತುಳು ಭಾಷೆಯಲ್ಲಿ ಅಪಾರವಾದ ಶಬ್ದ ಸಂಪತ್ತು, ಸುಂದರ ಸುಭಾಷಿತಗಳು, ಒಗಟುಗಳಿವೆ. ಹೀಗಿದ್ದರೂ ತುಳು ಭಾಷೆಯಲ್ಲಿ ನಾಟಕ ಪ್ರಕಾರವೆಂಬುದು ತೀರಾ ತಡವಾದ ಸೃಷ್ಟಿಯೆನ್ನಬಹುದು. ಇದಕ್ಕೆ ಕಾರಣವೆಂದರೆ ಒಂದು– ತುಳುವಿಗೆ ತನ್ನದೇ ಆದ ಜನಪದ ರಂಗಭೂಮಿ ಇತ್ತು. ಇನ್ನೊಂದು– ಇತಿಹಾಸದ ವಿವಿಧ ಕಾಲಘಟ್ಟಗಳಲ್ಲಿ ತುಳುನಾಡು ಅಧೀನ ಸಂಸ್ಕೃತಿಗೆ ಒಳಗಾಯಿತು. ಭಾಷಾವಾರು ಪ್ರಾಂತ್ಯ ರಚನೆಯ ಬಳಿಕ ತುಳುನಾಡು ಕನ್ನಡ ನಾಡಿನ ಭಾಗವಾಯಿತು; ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯೆಂದಾಯಿತು. ತುಳುನಾಡಿನ ರಾಜಭಾಷೆ ಅಂತೂ ಕನ್ನಡ. ಓದು ಬರಹ ಬಲ್ಲವರಾಗಿ ಸಾಹಿತ್ಯ ರಚನೆ, ನಾಟಕ ರಚನೆಗೆ ತೊಡಗಿದವರೂ ಕನ್ನಡ ಮತ್ತಿತರ ಭಾಷೆಗಳಲ್ಲೇ ಬರೆದರು.

ಕರಾವಳಿ ಕರ್ನಾಟಕದ ಸಾಂಸ್ಕೃತಿಕ ಚರಿತ್ರೆಯಲ್ಲಿ ರಂಗಭೂಮಿಗೆ ಮಹತ್ವವಾದ ಸ್ಥಾನವಿದೆ. ಅದರಲ್ಲೂ ತುಳು ರಂಗಭೂಮಿ ದಶಕಗಳ ಕಾಲ ಜಾನಪದ, ಪೌರಾಣಿಕ, ಚಾರಿತ್ರಿಕ ಹಾಗೂ ಹಾಸ್ಯದ ಚೌಕಟ್ಟಿನಲ್ಲೇ ಪ್ರದರ್ಶನವಾಗುತ್ತಿತ್ತು. ರಂಗಭೂಮಿಯನ್ನು ಕೇವಲ ಮನರಂಜನೆಯ ಮಾಧ್ಯಮವಾಗಿ ನೋಡುತ್ತಿದ್ದ ಆ ಕಾಲಘಟ್ಟದಲ್ಲಿ, ಅದಕ್ಕೊಂದು ವೈಚಾರಿಕ ಅಡಿಪಾಯ ಹಾಕಿ, ಅಂತರಂಗದ ತಲ್ಲಣಗಳನ್ನು ಅಭಿವ್ಯಕ್ತಿಸುವ 'ನವ್ಯ' ಸ್ಪರ್ಶ ನೀಡಿದ ಅಪರೂಪದ ರಂಗಕರ್ಮಿ ಮನು ಇಡ್ಯಾ (ಜನಾರ್ದನ ಪಿ. ಸಾಲಿಯಾನ್) ಎಂದರೆ ತಪ್ಪಾಗದು. ತುಳು ನಾಟಕ ರಂಗವನ್ನು ಸಾಂಪ್ರದಾಯಿಕತೆಯ ಆವರಣದಿಂದ ಹೊರತಂದು, ಆಧುನಿಕ ರಂಗಭೂಮಿಯ ಚರ್ಯೆಗಳಿಗೆ ತೆರೆದಿಟ್ಟ ಹಿರಿಮೆ ಮನು ಇಡ್ಯಾ ಅವರಿಗೆ ಸಲ್ಲುತ್ತದೆ. ತುಳು ರಂಗಭೂಮಿ ಎಂದರೆ ಸುದೀರ್ಘ ಸಂಭಾಷಣೆ, ಅತಿಯಾದ ಭಾವನಾತ್ಮಕತೆ ಮತ್ತು ಪ್ರೇಕ್ಷಕರನ್ನು ನಗಿಸುವ ಹಾಸ್ಯ ದೃಶ್ಯಗಳು ಎಂಬ ಲೌಕಿಕ ನಂಬಿಕೆಯಿತ್ತು. ಆದರೆ ಮನು ಇಡ್ಯಾ ಅವರು ತಮ್ಮ ಪ್ರಯೋಗಗಳ ಮೂಲಕ ಸಾಂಪ್ರದಾಯಿಕತೆಯಿಂದ ನವ್ಯತೆಯೆಡೆಗೆ ನಾಟಕದ ಸ್ವರೂಪವನ್ನೇ ಪಲ್ಲಟಗೊಳಿಸಿದರು.

ತುಳು ರಂಗಭೂಮಿಯಲ್ಲಿ ವಿಚಾರಶಕ್ತಿಯ ನಾಟಕಗಳ ಮೂಲಕ ಹೊಸ ದಾರಿಯನ್ನು ತೋರಿದ ಪ್ರತಿಭಾನ್ವಿತ ಬರಹಗಾರ ಮನು ಇಡ್ಯಾರವರ ನಾಟಕಗಳು ತಮ್ಮದೇ ಆದ ವಿಶಿಷ್ಟ ಧ್ವನಿಯನ್ನು ಹೊಂದಿವೆ. ಅವರ ನಾಟಕಗಳ ವಸ್ತು ಗಮನಾರ್ಹ ಮತ್ತು ಬಂಡಾಯದ ಕಿಡಿಯನ್ನು ಒಳಗೊಂಡಿವೆ. ನಾಟಕದ ಭಾಷೆ ಮತ್ತು ನಿರೂಪಣೆಯು ಸಶಕ್ತವಾಗಿದೆ. ಸಮಾಜದ ಓರೆಕೋರೆಗಳಿಗೆ ಕನ್ನಡಿ ಹಿಡಿಯುತ್ತವೆ. ಶತಮಾನಗಳಿಂದ ಮೇಲ್ವರ್ಗದವರ ಅಡಿಯಾಳಾಗಿ ಬದುಕಿ ಅನುಭವಿಸಿದ ಸಂಕಟ, ದುಃಖವನ್ನು ಪರಿಣಾಮಕಾರಿಯಾಗಿ ತಮ್ಮ ನಾಟಕದಲ್ಲಿ ಚಿತ್ರಿಸಿದ್ದಾರೆ.

ಸಮಾಜದಲ್ಲಿ ನಡೆಯುವ ಅನ್ಯಾಯವನ್ನು ಪ್ರಜ್ಞಾವಂತ ನಾಗರಿಕರು ಒಂದಾಗುವ ಮೂಲಕ ಹೇಗೆ ತಡೆಯಬಹುದೆಂಬ ಜ್ಞಾನವನ್ನು ಕೊಡುವ ಇಡ್ಯಾರವರ 'ತಿರ್ಸಂಕು' ನಾಟಕ ಬಹಳ ಮೆಚ್ಚುಗೆಯನ್ನು ಪಡೆದಿದೆ. ಅವರು ಬರೆದ 'ಬಲಿ' ಎಂಬ ನಾಟಕವೂ ತುಳು ಸಾಹಿತ್ಯದ ಭಂಡಾರಕ್ಕೆ ಉತ್ತಮ ಕೊಡುಗೆಯಾಗಿದೆ. ತುಳುವಿಗೆ ಕ್ರಾಂತಿಕಾರಕ ನವ್ಯ ನಾಟಕಗಳನ್ನು ನೀಡಿ ಮತ್ತಿಷ್ಟು ಹೊಸ ರೂಪ ನೀಡಿದ್ದ ಮನು ಇಡ್ಯಾ (ಜನಾರ್ದನ ಪಿ. ಸಾಲಿಯಾನ್, ಸುರತ್ಕಲ್)ರ ನಾಟಕಗಳು 'ಪಲ್ಲೆ ಅಂಕಿ' (ಪಲ್ಲೆಂಕಿ), 'ಅಮಾಸೆ', 'ನನ ಉಚ್ಚಯ', 'ಬಲಿ', 'ಮಾರಿ ಗಿಡಪ್ಪುಲೆ', 'ತಿರ್ಸಂಕು' – ಈ ಆರೂ ನಾಟಕಗಳಲ್ಲಿ ಹರಿತ ಭಾಷೆಯ ಸಂಭಾಷಣೆ, ಪರಂಪರೆಗೆ ಸಡ್ಡು ಹೊಡೆಯುವ ತೀಕ್ಷ್ಣ ಕಥಾಹಂದರವಿದೆ. ಕಾವ್ಯಮಯ ಭಾಷೆ, ಚುರುಕಾದ ಸಂಭಾಷಣೆ, ಬಂಡಾಯ ಧ್ವನಿ – ಮನು ಅವರ ನಾಟಕಗಳ ವೈಶಿಷ್ಟ್ಯ . 1975ರಲ್ಲೇ ಬರೆದಿದ್ದ 'ತಿರ್ಸಂಕು' ಮತ್ತು 'ಬಲಿ' ನಾಟಕಗಳು 1992ರಲ್ಲಿ

ಪ್ರಕಟವಾಗಿವೆ. ಅವರದೇ ಆದ 'ಸಿಂಗಾರ ಸುರತ್ಕಲ್' ತಂಡವು ಹಲವು ನಾಟಕ ಸ್ಪರ್ಧೆಗಳಲ್ಲಿ ಪಾಲ್ಗೊಂಡು ಪ್ರಶಸ್ತಿ ಪುರಸ್ಕೃತವಾಗಿವೆ. ಮನು ಇಡ್ಯಾರವರು ಬರೆದ ನಾಟಕಗಳು ತುಳು ಭಾಷೆಯ ಚೌಕಟ್ಟಿನಲ್ಲಿ ನಾಟಕದ ಒಳಪದರಗಳನ್ನು/ಆಳವನ್ನು ತೋರಿಸುವ ದೃಷ್ಟಿಯಿಂದ ಅತ್ಯುತ್ತಮ ರಂಗಕೃತಿಗಳು.

ಮನು ಇಡ್ಯಾ ಅವರು ಕೇವಲ ಸಾಂಪ್ರದಾಯಿಕ ವಿಚಾರಗಳನ್ನು ನಾಟಕ ರೂಪಕ್ಕೆ ಇಳಿಸಲಿಲ್ಲ; ಬದಲಾಗಿ ತುಳು ಮಣ್ಣಿನ ಸಂವೇದನೆಗೆ ಜಾಗತಿಕ ರಂಗಭೂಮಿಯ 'ನವ್ಯತೆ'ಯನ್ನು ಜೋಡಿಸಿದರು. ತುಳು ಸಾಹಿತ್ಯ ಮತ್ತು ರಂಗಭೂಮಿಯಲ್ಲಿ ಹೊಸ ಅಲೆಯನ್ನ ಸೃಷ್ಟಿಸಿದ ಇವರ ಪ್ರಯೋಗಶೀಲತೆಯಿಂದಾಗಿ, ಅವರನ್ನು 'ತುಳು ನವ್ಯ ರಂಗಭೂಮಿಯ ಪ್ರವರ್ತಕ' ಎಂದು ಕರೆಯುವುದು ಅರ್ಥಪೂರ್ಣವಾಗಿದೆ. ನಾಟಕವು ಕೇವಲ ಕಣ್ಣಿಗೆ ಕಾಣುವ ಸನ್ನಿವೇಶಗಳ ಪ್ರದರ್ಶನವಲ್ಲ; ಅದು ಮನುಷ್ಯನ ಅಂತರಂಗದ ಸಂಘರ್ಷ ಮತ್ತು ಮನೋವಿಶ್ಲೇಷಣೆ ಎಂಬುದನ್ನು ತಮ್ಮ ಕೃತಿಗಳ ಮೂಲಕ ನಿರೂಪಿಸಿದರು. ರಂಗಭೂಮಿಯ ಕಥಾವಸ್ತುವನ್ನು ವೈಯಕ್ತಿಕ ಸಂಕಟಗಳಿಂದ ಸಾಮಾಜಿಕ ಹಾಗೂ ಅಸ್ತಿತ್ವವಾದದ ಪ್ರಶ್ನೆಗಳತ್ತ ಕೊಂಡೊಯ್ದರು. ಮನು ಇಡ್ಯಾ ಅವರ ನಾಟಕಗಳಲ್ಲಿ ನವ್ಯತೆಯ ರೂಪಕಗಳು ಮತ್ತು ರಂಗಭೂಮಿಯ ಮುಖ್ಯ ಲಕ್ಷಣಗಳಾದ 'ರೂಪಕಗಳ ಬಳಕೆ' ಹಾಗೂ 'ಸಾಂಕೇತಿಕತೆ'ಯು ಜೀವಾಳವಾಗಿದೆ.

'ಮಾರಿ ಗಿಡಪ್ಪುಲೆ' ನಾಟಕದ ವೈಚಾರಿಕತೆ: ಜಾನಪದೀಯ ಶೀರ್ಷಿಕೆ ಮತ್ತು ಹಿನ್ನೆಲೆಯನ್ನು ಹೊಂದಿದ್ದರೂ, ಈ ನಾಟಕದಲ್ಲಿ ಮೂಢನಂಬಿಕೆಯನ್ನು ಕೇವಲ ಆಚರಣೆಯಾಗಿ ನೋಡದೆ, ಅದರಿಂದ ಸಮಾಜದ ಮೇಲಾಗುವ ಮಾನಸಿಕ ಪರಿಣಾಮಗಳನ್ನು ವಿಶ್ಲೇಷಿಸುತ್ತಾರೆ. ಮಾರಿ ಓಡಿಸುವುದು ಎಂದರೆ ಬಾಹ್ಯ ಶಕ್ತಿಯನ್ನಲ್ಲ, ಅಂತರಂಗದ ಅಜ್ಞಾನ ಮತ್ತು ಶೋಷಣೆಯನ್ನು ಎಂಬ ನವ್ಯ ಚಿಂತನೆ ಇಲ್ಲಿದೆ. ಸಾಮಾಜಿಕ ಮೂಢನಂಬಿಕೆಗಳನ್ನು ವಿಮರ್ಶಿಸುವ ಇಡ್ಯಾರವರು ಸಾಂಪ್ರದಾಯಿಕವಾಗಿ ಬಂದ ಪದ್ಧತಿಗಳನ್ನು ಕಣ್ಣು ಮುಚ್ಚಿ ಒಪ್ಪಿಕೊಳ್ಳದೆ, ಜಾಗೃತ ಮನಸ್ಸಿನಿಂದ ಪ್ರಶ್ನಿಸುವ ಪ್ರಯತ್ನ ಮಾಡುತ್ತಾರೆ. ಜೊತೆಗೆ ಇತಿಹಾಸದಲ್ಲಿ ನಡೆದಿರಬಹುದಾದ ಕ್ರೌರ್ಯವು ಆಚರಣೆಯ ನೆಪದಲ್ಲಿ ಪಾಲನೆಯಾಗುವುದನ್ನು ಗುರುತಿಸುತ್ತಾರೆ. ಈ ನಾಟಕದಲ್ಲಿ ಬರುವ ಪಾತ್ರಗಳು ಕೇವಲ ಬಿಳಿಯ ಅಥವಾ ಕಪ್ಪು (ಒಳ್ಳೆಯ ಅಥವಾ ಕೆಟ್ಟ ) ಪಾತ್ರಗಳಾಗಿರದೆ, ಮಾನವ ಸಹಜ ದೌರ್ಬಲ್ಯಗಳು, ಗೊಂದಲಗಳು ಮತ್ತು ತುಡಿತಗಳನ್ನು ಹೊಂದಿರುವ ಸಂಕೀರ್ಣ ಪಾತ್ರಗಳಾಗಿವೆ. ರಂಗ ತಂತ್ರಜ್ಞಾನ ಮತ್ತು ಸಂಭಾಷಣೆಯ ನೆಲೆಯಿಂದ ನವ್ಯ ರಂಗಭೂಮಿಯ ಪ್ರಮುಖ ಲಕ್ಷಣವಾದ ರಂಗವಿನ್ಯಾಸ ಮತ್ತು ಭಾಷೆಯ ಬಳಕೆಯಲ್ಲಿನ ಮಿತವ್ಯಯತೆ ಗಮನ ಸೆಳೆಯುತ್ತದೆ. ಸುದೀರ್ಘ ಭಾಷಣಗಳ ಬದಲು, ಆಲೋಚನೆಗೆ ಹಚ್ಚುವ, ನೇರ ಹಾಗೂ ಸಾಂಕೇತಿಕ ಸಂಭಾಷಣೆಗಳನ್ನು ಬಳಸಿ ಪ್ರೇಕ್ಷಕರು ಸಕ್ರಿಯವಾಗಿ ಚಿಂತಿಸುವಂತೆ ಮಾಡಿದರು. ರಂಗಸಜ್ಜಿಕೆಯ ಪ್ರಯೋಗಗಳ ಬಗ್ಗೆ ಹೇಳುವುದಾದರೆ ಅದ್ದೂರಿ ಸೆಟ್‌ಗಳಿಗಿಂತ ಬೆಳಕು ಮತ್ತು ನೆರಳಿನ ಆಟ, ಹಿನ್ನೆಲೆ ಸಂಗೀತ ಹಾಗೂ ಅಭಿನಯದ ಮೂಲಕವೇ ಸನ್ನಿವೇಶ ಸೃಷ್ಟಿಸುವ ರಂಗತಂತ್ರವನ್ನು ಇವರು ಬಳಸಿದರು. ಹೀಗೆ ಮನು ಇಡ್ಯಾ ಅವರ ನವ್ಯ ಕಲ್ಪನೆಗಳು ತುಳು ಹವ್ಯಾಸಿ ರಂಗಭೂಮಿಗೆ ಹೊಸ ದಾರಿಯನ್ನು ತೋರಿಸಿದವು. ಆ ಮೂಲಕ ತುಳು ಭಾಷೆಯಲ್ಲೂ ಗಂಭೀರವಾದ, ಪ್ರಾಯೋಗಿಕ ಮತ್ತು ಸಾಹಿತ್ಯಿಕ ಮೌಲ್ಯವಿರುವ ನಾಟಕಗಳನ್ನು ತರಲು ಸಾಧ್ಯ ಎಂಬುದನ್ನು ತೋರಿಸಿಕೊಟ್ಟರು. ಇದರಿಂದ ಮುಂದಿನ ಪೀಳಿಗೆಯ ಯುವ ರಂಗಕರ್ಮಿಗಳಿಗೆ, ಪ್ರಾಯೋಗಿಕ ನಾಟಕಕಾರರಿಗೆ ಇವರ ಚಿಂತನೆಗಳು ಮಾರ್ಗದರ್ಶಕವಾದವು.

ನಾಟಕ ರಚನಾ ವಿಭಾಗದಲ್ಲಿ ಹೆಸರು ಪಡೆದ ಮನು ಇಡ್ಯಾರವರ ಪ್ರಸಿದ್ಧ ನಾಟಕವೆಂದರೆ 'ಮಾರಿ ಗಿಡಪ್ಪುಲೆ' ಆಗಿದೆ. 1991ರಲ್ಲಿ ಉಡುಪಿಯ ನರ್ತಕಿ ಕಲಾರಂಗ, ಕಟಪಾಡಿ(ರಿ) ಇವರು ಆಯೋಜಿಸಿದ ದಿ. ಶ್ರೀನಿವಾಸ ಕೊರಡ್ಕಲ್ ಸ್ಮರಣಾರ್ಥ ತುಳು ನಾಟಕ ರಚನಾ ಸ್ಪರ್ಧೆಯಲ್ಲಿ ರಚನೆಯಾದ ಈ ನಾಟಕ ದ್ವಿತೀಯ ಬಹುಮಾನವನ್ನು ಪಡೆದುಕೊಂಡಿದೆ. ಅಲ್ಲದೆ ಸುರತ್ಕಲ್‌ನ 'ಸಿಂಗಾರ' ತಂಡದ ಮೂಲಕ ಪ್ರದರ್ಶಿತವಾದ ಈ ನಾಟಕದ ತಿರುಳು ಗಮನಾರ್ಹವಾಗಿದೆ. ಜಾತಿಗಿಂತಲೂ ನೀತಿ ಮುಖ್ಯ ಎಂಬುದನ್ನು ತೋರಿಸುವ ಮೂಲಕ ಹಲವು ಸ್ಪರ್ಧೆಗಳಲ್ಲಿ ಬಹುಮಾನವನ್ನು ಪಡೆದುಕೊಂಡಿದೆ. ಈ ನಾಟಕವು ಜನ ಮನದಲ್ಲಿ, ಆಚರಣೆಯಲ್ಲಿರುವ ಸಂಗತಿಯೊಂದನ್ನು ಹೊಸ ದೃಷ್ಟಿಕೋನದಿಂದ ನೋಡುವ ಮೂಲಕ ಸತ್ಯವನ್ನು ತಿಳಿಸುವ ಪ್ರಯತ್ನ ಮಾಡುತ್ತದೆ. ಸಮಾಜವನ್ನು ತಿದ್ದಲು ಮುಂದಾಗುತ್ತದೆ. ಗ್ರಾಮೀಣ ಜನರ ನಂಬಿಕೆಯಂತೆ ರೋಗ ರುಜಿನ ದೂರ ಮಾಡುವ ಗ್ರಾಮ ದೇವತೆ ಮಾರಿಗೆ ಭಯಭಕ್ತಿಯಿಂದ ನಡೆದುಕೊಳ್ಳುವುದು ಮುಖ್ಯವೆನ್ನಬಹುದು. ಪೂಜೆಯ ಮೂಲಕ ಪ್ರಸನ್ನವಾದ ಮಾರಿಯನ್ನು ಊರಿನಿಂದ ಹೊರಗೆ ಅಟ್ಟುವ ರೂಢಿಯನ್ನು 'ಮಾರಿ ಓಡಿಸುವುದು' ಎನ್ನುತ್ತಾರೆ. ಇದನ್ನು ರೂಪಕವಾಗಿ ಬಳಸಿಕೊಂಡು ಪ್ರಬುದ್ಧ ಚಿಂತನೆಯೊಂದನ್ನು ಇಡ್ಯಾರವರು ಪ್ರಕಟಪಡಿಸಿದ್ದಾರೆ.

'ಮಾರಿ ಗಿಡಪ್ಪುಲೆ' ನಾಟಕವು ಮನುಷ್ಯ ಮನುಷ್ಯನ ಸಂಬಂಧದ ಕತೆಯನ್ನು ಒಳಗೊಂಡಿದೆ. ಹಾಗೆಯೇ ನಮ್ಮೊಳಗಿನ ಅಜ್ಞಾನವೆಂಬ ಮಾರಿಯನ್ನು ಓಡಿಸಬೇಕೆಂಬ ಆಶಯ ಇಲ್ಲಿದೆ. ಈ ಮಾರಿ ಓಡಿಸುವ ಪ್ರಕ್ರಿಯೆಗೆ ಕೊನೆಯಿಲ್ಲ. ಇಡ್ಯಾರವರ ಪ್ರಕಾರ ಈ ಮಾರಿಯ ಸೃಷ್ಟಿ ಮನುಷ್ಯನಿಂದಲೇ ಆಗಿದೆ. ನಾವೇ ಸೃಷ್ಟಿಸಿದ ಸಮಸ್ಯೆಯನ್ನು ನಾವೇ ನಿವಾರಿಸಬೇಕು. ಅದರಿಂದ ಅಂತರ ಕಾಯ್ದುಕೊಳ್ಳುವುದು ಸಮ್ಮತವಲ್ಲ. ನಮ್ಮ ಸಮಾಜದಲ್ಲಿ ಶ್ರೀಮಂತ ಬಡವ, ಮೇಲುಕೀಳು, ಕಪ್ಪುಬಿಳುಪು ಮುಂತಾದ ತಾರತಮ್ಯದ ಮನೋಭಾವವಿರುವ ಸನ್ನಿವೇಶಗಳು ಬಹಳಷ್ಟಿವೆ. ತಾನೊಬ್ಬನೇ ಬದುಕಬೇಕು, ಬದುಕಿನ ಸುಖಸಂಪತ್ತು ತನಗೆ ಮಾತ್ರ ಸಿಗಬೇಕೆಂಬ ಸ್ವಾರ್ಥ ಮನುಷ್ಯನ ಮನಸ್ಸಿನಲ್ಲಿ ನೆಲೆಯಾಗಿರುತ್ತದೆ. ಇಂತಹ ಸ್ವಹಿತದ ಚಿಂತನೆಯು ಮನುಷ್ಯನಲ್ಲಿರುವ ಮಾನವೀಯತೆಯನ್ನು ಮರೆಯುವಂತೆ ಮಾಡುತ್ತದೆ. ಮೇಲುಕೀಳು ಎಂಬ ಭೇದವನ್ನು ತೊಡೆದು ಹಾಕಬೇಕಾದರೆ ಮನುಷ್ಯನಲ್ಲಿರುವ ಜಾತಿಮೋಹ ದೂರವಾಗಬೇಕು. ಸೌಹಾರ್ದಯುತ ಸಂಬಂಧ ಬೆಳೆಯಬೇಕು. ತನ್ನಂತೆ ಪರರು ಎಂಬ ಮನೋಭಾವ ಮೂಡಬೇಕು. ಆದರೆ ಇಂತಹ ಸಂಬಂಧವನ್ನು ಬೆಳೆಯಲು ಬಿಡದೆ ಅನಿಷ್ಟ ಮಾರಿ ಎಂದು ಕರೆದು ಸುಂದರವಾದ ಬದುಕನ್ನು ಹಾಳು ಮಾಡಿಕೊಳ್ಳುವುದು ಎಷ್ಟು ಸರಿ ಎಂದು ಪ್ರಶ್ನಿಸುತ್ತಾರೆ.

'ಮಾರಿ ಗಿಡಪ್ಪುಲೆ' ನಾಟಕದಲ್ಲಿ ಮೇಲ್ವರ್ಗದ ಮುಖ್ಯಸ್ಥ ಪುರುವಿನ ಮಗಳು ರೋಚನಾ ಕೆಳಜಾತಿಯ ಬಬ್ಬುವನ್ನು ಪ್ರೀತಿಸಿ ತನ್ನ ಸಮುದಾಯದ ವಿರೋಧದ ನಡುವೆಯೂ ಮದುವೆಯಾಗುತ್ತಾಳೆ. ಇದನ್ನು ಸಹಿಸದ ಪುರು ಮತ್ತವನ ಕಡೆಯವರು ಸಂಚು ಹೂಡಿ ಕೆಳ ಸಮುದಾಯದ ಜನರನ್ನು ಶೋಷಿಸಲು ಮುಂದಾಗುತ್ತಾರೆ. ಎರಡೂ ಸಮುದಾಯದ ಜನರು ಪೂಜಿಸುವ ದೇವಿಯು ಬ್ರಹ್ಮ ದೇವರ ಮಗಳಾಗಿದ್ದು ದೇವರ ಶಾಪದಿಂದ ರೋಚನಾಳಾಗಿ ಜನಿಸಿದ್ದಾಳೆ. ಅಂತಹ ದೇವಿಯನ್ನು ಬಬ್ಬುವು ಪ್ರೀತಿಸಿ ಮೈಲಿಗೆ ಮಾಡಿದ್ದಾನೆ. ಅವನು ಮಾಡಿದ ತಪ್ಪಿಗೆ ದೇವಿಯೇ ಅವನನ್ನು ಸಂಹರಿಸುತ್ತಾಳೆ ಎಂದು ಮೌಢ್ಯವನ್ನು ಬಿತ್ತುತ್ತಾರೆ. ಅಲ್ಲದೆ ರೋಚನಾ ಮತ್ತವಳ ಇಬ್ಬರು ಮಕ್ಕಳನ್ನು ಉರಿಯುವ ಬೆಂಕಿಯಲ್ಲಿ ಜೀವಂತವಾಗಿ ಸುಡಲಾಗುತ್ತದೆ. ಬಬ್ಬುವನ್ನು ಮಾರಿಯನ್ನು ಅಟ್ಟಿಸಿಕೊಂಡು

ಹೋಗುವ ನೆಪದಲ್ಲಿ ಹತ್ಯೆಗೈಯ್ಯಲಾಗುತ್ತದೆ. ಆ ಮೂಲಕ ಅನಕ್ಷರಸ್ಥ ಕೆಳ ಸಮುದಾಯದ ಜನರಲ್ಲಿ ಮೌಢ್ಯವನ್ನು ತುಂಬಿ ಅವರನ್ನು ಮೂಲೆಗುಂಪು ಮಾಡಲಾಗುತ್ತದೆ. ತುಳುನಾಡಿನಲ್ಲಿ ಪ್ರಚಲಿತವಿರುವ ಮಾರಿ ಆರಾಧನೆಯ ಹಿಂದಿನ ಸತ್ಯವನ್ನು ಮನು ಇಡ್ಯಾರವರು ತಮ್ಮ ಸೃಜನಶೀಲತೆಯಿಂದ ಮರು ನಿರೂಪಿಸುವ ಕೆಲಸವನ್ನು ಅಚ್ಚುಕಟ್ಟಾಗಿ ನಿರ್ವಹಿಸಿ ಚರಿತ್ರೆಯಲ್ಲಿ ನಡೆದು ಹೋಗಿರಬಹುದಾದ ನೈಜ ಘಟನೆಯ ಕಡೆಗೆ ಬೆಳಕು ಚೆಲ್ಲುತ್ತಾರೆ.

ಒಬ್ಬ ಹೆಣ್ಣು ಒಬ್ಬ ಗಂಡನ್ನು ಅಥವಾ ಒಬ್ಬ ಗಂಡು ಒಬ್ಬ ಹೆಣ್ಣನ್ನು ಮೆಚ್ಚಿಕೊಳ್ಳುವುದು ಬಯಸುವುದು ಪ್ರಕೃತಿಯ ಮೂಲಗುಣ. ಇದನ್ನು ಮೀರಿ ತಾನು ಗೆಲ್ಲುತ್ತೇನೆ ಎಂದು ಹೇಳುವುದು ಪ್ರಕೃತಿಗೆ ವಿರೋಧವಾದ ನಡವಳಿಕೆ. ವಾಸ್ತವದಲ್ಲಿ ಪ್ರಕೃತಿಗೆ ಎದುರಾಳಿಯಾಗಲು ಮನುಜನಿಂದ ಸಾಧ್ಯವೇ? ಹಾಗೇನಾದರೂ ಆದಲ್ಲಿ ಆತ ಮನುಷ್ಯನಾಗಿರಲು ಸಾಧ್ಯವಿಲ್ಲ. ಗಂಡು ಹೆಣ್ಣು ಒಟ್ಟಾಗಿ ಬದುಕುವುದನ್ನು ತಪ್ಪು, ಅನಿಷ್ಟ ಎಂದು ಹೇಳಿ ಜಾತಿನೀತಿಯ ನೆಲೆಯಲ್ಲಿ ಆರೋಪ ಮಾಡಿ ಕೊಲ್ಲುವ ಮನಸ್ಥಿತಿ ಇಲ್ಲಿ ಕಾಣಸಿಗುತ್ತದೆ. ತನ್ನ ದೇವರು, ತನ್ನ ಜಾತಿ, ತನ್ನ ಭಾಷೆ, ತನ್ನ ಬದುಕು ಭಾಗ್ಯದ ಹೆಸರಿನಲ್ಲಿ ಮತ್ತೊಂದು ಸಮುದಾಯದ ಮೇಲೆ ದೌರ್ಜನ್ಯವೆಸಗುವುದು ಎಷ್ಟು ಸರಿ? ತನ್ನ ಹಾಗೆಯೇ ಇತರರಿಗೂ ಸುಂದರವಾದ ಬದುಕು ಇದೆಯೆಂಬುದನ್ನು ಮರೆತಾಗ ಆ ವ್ಯಕ್ತಿ ಸಮಾಜಕ್ಕೆ ಮಾರಿ ಆಗುತ್ತಾನೆ. ಹಾಗಾಗಿ ನಮ್ಮೊಳಗಿನ ಈ ಮಾರಿಯನ್ನು ನಾವು ಓಡಿಸಿದಾಗ ಸ್ವಸ್ಥ ಸಮಾಜ ನಿರ್ಮಾಣ ಸಾಧ್ಯವೆಂಬುದನ್ನು ಮನು ಇಡ್ಯಾರವರು ಸಾರಿ ಹೇಳಿದ್ದಾರೆ.

'ತಿರ್ಸಂಕು' ನಾಟಕವನ್ನು ಇಡ್ಯಾರವರು 1975ರಲ್ಲಿ ರಚಿಸಿದ್ದು. ಹಲವು ಪ್ರದರ್ಶನಗಳನ್ನು ಕಂಡು ಮೆಚ್ಚುಗೆ ಪಡೆದಿದೆ. ಈ ನಾಟಕದಲ್ಲಿ ವಸ್ತುವಿನ ಬಿಗಿ, ಭಾಷಾ ಸೌಂದರ್ಯ, ರಂಗತಂತ್ರದ ಸಾಧ್ಯತೆ ಅಷ್ಟಾಗಿ ಕಾಣಸಿಗದು. ಬಹಳ ಹಿಂದೆ ಬರೆದ ಕಾರಣದಿಂದಾಗಿ ಆ ಕಾಲದ ಇತರ ತುಳುನಾಟಕಗಳ ಪ್ರಭಾವ ಇದ್ದಿರಲೂ ಸಾಕು. ಆದರೂ ಇಡ್ಯಾರಲ್ಲಿರುವ ಪ್ರಗತಿಪರ ಜನಪರ ನಾಟಕಕಾರನ ಲಕ್ಷಣವನ್ನು ಈ ನಾಟಕದಲ್ಲಿ ಗುರುತಿಸಬಹುದು. ಈ ನಾಟಕದಲ್ಲಿ 'ಗುರ್ಕಾರ'ನ ಪಾತ್ರ ಪ್ರಮುಖವಾದುದು. ಆತ ಇಲ್ಲಿ ಖಳನಾಯಕ. ಅವನಿಗೆ ಎದುರಾಗಿ ಜನಶಕ್ತಿ ಇದೆ. ಈ ಜನಸಮೂಹಕ್ಕೆ ಒಬ್ಬ ನಾಯಕನಿಲ್ಲ. ಗುರ್ಕಾರನ ಅನ್ಯಾಯ, ಶೋಷಣೆಗೆ ಗುರಿಯಾದವರೆಲ್ಲಾ ಅದರಲ್ಲಿದ್ದಾರೆ. ಹೀಗೆ ಎರಡು ಶಕ್ತಿಗಳ ನಡುವಿನ ಸಂಘರ್ಷದೊಂದಿಗೆ ನಾಟಕ ಬೆಳೆಯುತ್ತದೆ. ಇಲ್ಲಿ ನಾಟಕಕಾರರು ಗುರ್ಕಾರನ ಪಾತ್ರಕ್ಕೆ ಕೊಟ್ಟಷ್ಟು ಪ್ರಾಮುಖ್ಯತೆಯನ್ನು ಇತರ ಪಾತ್ರಗಳಿಗೆ ನೀಡಿಲ್ಲ. ಹಾಗಾಗಿ ನಾಟಕದ ವಸ್ತು ಸಮತೋಲನದಿಂದ ಕೂಡಿಲ್ಲ ಎನ್ನಬಹುದು. ನಾಟಕದಲ್ಲಿ ಬರುವ ಗುರ್ಕಾರ ಮಾಡದ ಅನ್ಯಾಯವಿಲ್ಲ. ಆತ ಎಂಕಟಣ್ಣನ ಹೆಂಡತಿ ರಾಧುವನ್ನು ಕೊಲೆಗೈದುದರಿಂದ ಎಂಕಟು ಮತಿವಿಕಳನಾಗುತ್ತಾನೆ. ತನ್ನ ಮಗನನ್ನೇ ನಾಯಿಯ ಹಾಗೆ ಕಟ್ಟಿ ಹಾಕುತ್ತಾನೆ. ಊರಿನ ಹೆಂಗಸರ ಮೇಲೆ ಕಣ್ಣು ಹಾಕುತ್ತಾನೆ. ದೈವದ ಹೆಸರಿನಲ್ಲಿ ತನಗೆ ಎದುರಾಗಿ ನಿಂತವರನ್ನು ವಿಷ ಹಾಕಿ ಸಾಯಿಸುತ್ತಾನೆ. ಹೀಗೆ ಮಾಡಬಾರದ ಪಾಪವನ್ನೆಲ್ಲಾ ಮಾಡಿ ಕೊನೆಗೊಂದು ದಿನ ಜನರ ಕೋಪಕ್ಕೆ ತಾನೇ ಆಹುತಿಯಾಗುತ್ತಾನೆ. ಒಳಗೂ ಸೇರದೆ ಹೊರಗೂ ಸೇರದೆ ಇರುವವರು ತ್ರಿಶಂಕುವಾಗಿ ತನ್ನ ಬದುಕನ್ನು ನಾಶಮಾಡಿಕೊಳ್ಳುತ್ತಾರೆ. ಈ ನಾಟಕದ ನಿರೂಪಣೆಯಲ್ಲಿ ಜನಶಕ್ತಿಯ ಮೇಲುಗೈಯನ್ನು ಪರಿಣಾಮಕಾರಿಯಾಗಿ ತೋರಿಸುವಲ್ಲಿ ಇಡ್ಯಾರು ಸಫಲರಾಗಿಲ್ಲವೆನ್ನಬಹುದು. ಆದರೆ ಈ ನಾಟಕದ ವಸ್ತುವಿನೊಳಗೆ ಒಂದು ಅಸಾಮಾನ್ಯವಾದ ಕ್ರಿಯಾಶೀಲತೆಯಿದೆ. ಪ್ರತಿಯೊಂದು ಸಂಭಾಷಣೆಯೂ ಕೂಡಾ ತಾನೇ ಕ್ರಿಯೆಗೆ ಅವಕಾಶ ಮಾಡಿಕೊಡುವಂತೆ ಮುಂದುವರಿಯುತ್ತದೆ. ಹಾಗಾಗಿ ನಾಟಕದ

ಓಟಕ್ಕೆ ಎಲ್ಲೂ ತಡೆಯಾಗದು. ಇಲ್ಲಿ ಹೇಳಬೇಕಾದ ಸಂಗತಿಯೆಂದರೆ ಮನು ಇಡ್ಯಾರವರ ರಂಗಕಲ್ಪನೆ ಅಚ್ಚರಿ ಮೂಡಿಸುತ್ತದೆ. ಸಂಭಾಷಣೆಯೇ ಇಲ್ಲದಂತೆ ನಾಟಕ ಮುಂದುವರಿಯುವ ಹಾಗೆ ಬರೆಯುವ ಸಾಮರ್ಥ್ಯ ಅವರಲ್ಲಿದೆ. ಇದು ಅವರಲ್ಲಿರುವ ಭಾಷಾ ಪ್ರೌಢಿಮೆಯನ್ನು, ಶ್ರೇಷ್ಠ ನಾಟಕಕಾರನ ಲಕ್ಷಣವನ್ನು ತೋರಿಸಿಕೊಡುತ್ತದೆ. ಇದಕ್ಕೆ ಪೂರಕವಾಗಿ ನಾಟಕದ ಪಾತ್ರವಾದ ಎಂಕಟುವಿನ ಸಂಭಾಷಣೆ ಪರಿಣಾಮಕಾರಿಯಾಗಿದ್ದು ತುಳುವಿನ ಭಾಷಾ ಶ್ರೀಮಂತಿಕೆಯನ್ನು ತೆರೆದಿಡುತ್ತದೆ. ನಾಟಕದಲ್ಲಿ ಬರುವ ಸಂಭಾಷಣೆಯ ಸಾಲುಗಳಾದ 'ಬೊಡೆದಿ ಪೆದ್ದರೆ ಪೋತೊಲು', 'ಪೊಣ್ಣನ ದೊಂಬು ತಾಗಂದಿನ ಮರಂಪುದ ಗಂಟ್', 'ತಂದೆಲ್ದ ಕೊಡಿಟ್ ಮುಂಡಾಸ್' ಇತ್ಯಾದಿ ನಾಟಕದ ವಸ್ತುವನ್ನು ಗಂಭೀರವಾಗಿ ನೋಡುವ ಪ್ರೇಕ್ಷಕರಿಗೆ ತಲುಪಿಸುತ್ತದೆ. 'ತನ್ನ ಭಾಷೆ ಮತ್ತು ಕ್ರಿಯಾಶೀಲತೆಯ ಕಾರಣದಿಂದ ರಂಗಭೂಮಿಯಲ್ಲಿ ಈ ನಾಟಕ ಬೆಳಗಲು ಸಾಧ್ಯವಿದೆ. ಇಡ್ಯಾರಂಥ ಇನ್ನೊಬ್ಬ ನಾಟಕಕಾರ ತುಳುವಿನಲ್ಲಿ ಬಲು ಅಪರೂಪ' ಎಂದು ವಿದ್ವಾಂಸರಾದ ಪುರುಷೋತ್ತಮ ಬಿಳಿಮಲೆಯವರು ಹೇಳಿರುವುದು ಅಕ್ಷರಶಃ ಸತ್ಯ. ಹೀಗೆ ಇಲ್ಲಿ ಮನು ಇಡ್ಯಾರವರ ಎರಡು ನಾಟಕಗಳನ್ನು ಪ್ರಧಾನವಾಗಿ ಮತ್ತಿತರ ನಾಟಕಗಳನ್ನು ಸ್ಥೂಲವಾಗಿ ನೋಡುವ ಪ್ರಯತ್ನ ಮಾಡಲಾಗಿದೆ.

ಮನು ಇಡ್ಯಾರ ನಾಟಕಗಳು ತುಳು ರಂಗಭೂಮಿಯ ಅಚ್ಚರಿಗಳು. ಸ್ವತಃ ಅವರು ಯಾವ ಬಿಳಿಕಾಲರಿನ ಉದ್ಯೋಗದವರಲ್ಲ. ಅವರು ಬರೆದ ನವ್ಯ ನಾಟಕಗಳು ತಮ್ಮೊಳಗಿನ ತೀವ್ರ, ಪ್ರಖರ ಚೈತನ್ಯದಿಂದ ಮೆರೆಯುತ್ತವೆ. ಹಲವು ತುಳು ನಾಟಕಕಾರರ ದುರದೃಷ್ಟದಂತೆ ಮನು ಇಡ್ಯಾರ ನವ್ಯ ನಾಟಕಗಳು ತಡವಾಗಿ ಮುದ್ರಿತವಾದವು. 'ತಿರ್ಸಂಕು' (1992) ಬಹು ಹಿಂದೆಯೇ ಪ್ರದರ್ಶಿತವಾಗಿದ್ದ ತುಳು ನವ್ಯ ನಾಟಕ. 'ಬಲಿ' (1989) ಅವರ ಇನ್ನೊಂದು ಮುದ್ರಿತ ನಾಟಕ. ವಸ್ತುವಿನಲ್ಲಿರುವ ಬಂಡಾಯದ ಕಾವು, ಭಾಷೆಯ ಶಕ್ತಿ, ಶಕ್ತಿಶಾಲಿ ಅಭಿವ್ಯಕ್ತಿಯ ಧೈರ್ಯ ಮನು ಇಡ್ಯಾರಲ್ಲಿದೆ. ಹಾಡು ಮತ್ತು ಮಾತುಗಳು ತೀವ್ರ ಚೈತನ್ಯಕ್ಕಾಗಿ ಆರಿಸಿ ಪೋಣಿಕೆಯಾಗುತ್ತವೆ. ಇವರಲ್ಲಿ ವೈಚಾರಿಕತೆ ಎಂಬುದು ಸಾಮಾಜಿಕ ಅನ್ಯಾಯದ ವಿಶ್ಲೇಷಣೆಯನ್ನು ಆವೇಶದಿಂದ ಮಾಡಿಕೊಡುವುದಕ್ಕಾಗಿದೆ. ಮನು ಇಡ್ಯಾರು ಬರೆದ ಹಲವು ನಾಟಕಗಳು ಮುದ್ರಿತವಾಗಿಲ್ಲ. ಅವುಗಳಲ್ಲಿ ಸಾಂಪ್ರದಾಯಿಕ ಕ್ರಮದ ನಾಟಕಗಳೂ ಇದ್ದವು. ಹಾಗಾಗಿ ಮನು ಇಡ್ಯಾರು ತುಳು ರಂಗಭೂಮಿಗೆ ಹೇಗೆ ಹೊಸತನ ತಂದಿದ್ದಾರೆಂಬುದು ಅವರ ಇತರ ನಾಟಕಗಳ ಮುದ್ರಣಗಳಿಲ್ಲದೆ ಪೂರ್ತಿ ಚರ್ಚೆಗೆ ಸಿಗದು. ಇನ್ನು 'ಬಲಿ' ನಾಟಕದ ಕತೆಯು ತುಳು ಪಾಡ್ದನಗಳಲ್ಲಿದೆ. ಅದನ್ನೆತ್ತಿಕೊಂಡಾಗಲೂ ಎಡಪಂಥೀಯ ಧೋರಣೆಗಳನ್ನು ಸೂಕ್ಷ್ಮವಾಗಿ ನಿರ್ವಹಿಸಿಕೊಂಡು, ವಿವಿಧ ಪಂಕ್ತಿಗಳನ್ನು – ಲೋಕಗಳನ್ನು ರಂಗದಲ್ಲಿ ಸೃಷ್ಟಿಸಲಾಗುತ್ತದೆ. ರಾಜ ಬಲಿಯ ದುರಂತವು ಕೆಳಗಿನ ಲೋಕದವರ ಮಾಗದ ನೋವಾಗುತ್ತದೆ. 'ತಿರ್ಸಂಕು' ನಾಟಕದಲ್ಲಿ... ಊರಿನ ಮುಖಂಡನ ಅನ್ಯಾಯಗಳನ್ನು ಪದರ ಪದರಗಳಲ್ಲಿ ಚರ್ಚಿಸಿ, ಊರಿನ ಆಕ್ರೋಶಕ್ಕೆ ಅವನು ಬಲಿಯಾಗುವುದನ್ನು ಚಿತ್ರಿಸಲಾಗುತ್ತದೆ. ಮನೆಗೂ, ನಾಡಿಗೂ ನೋವೇ ಕೊಟ್ಟಿದ್ದ ದುಷ್ಟನ ಬಲಿಯು ಅಧಿಕಾರಶಾಹಿಯೊಂದರ ಬಿಡುಗಡೆಯಾಗುತ್ತದೆ.

ಯಾವ ಅಕಡೆಮಿಕ್ ಹಿನ್ನೆಲೆಗಳನ್ನು ಕಲಿಕೆಯಲ್ಲಾಗಲೀ, ವೃತ್ತಿಯಲ್ಲಾಗಲೀ, ಪ್ರವೃತ್ತಿಯಲ್ಲಾಗಲೀ ಹೊಂದದೆ ಸಾಮಾನ್ಯ ಜೀವನ ನಡೆಸಿದ್ದಲ್ಲದೆ ತಮ್ಮೊಳಗಿನ ತೀವ್ರ ಪ್ರತಿಭಾಶಕ್ತಿಯಿಂದಲೇ ಹೊಸ ದಾರಿಯನ್ನು ತೆರೆದುಕೊಂಡ ನಾಟಕಕಾರ ಮನು ಇಡ್ಯಾ. 'ತಿರ್ಸಂಕು' ನಾಟಕವನ್ನು ಅವರು ಬರೆದ ಕಾಲಕ್ಕೆ ತುಳು ನಾಟಕಗಳ ಲೋಕದಲ್ಲಿ ಅವರು ಸಾಧಿಸಿದ ಮಹಾನ್ ಜಿಗಿತ ಎಷ್ಟೊಂದು ಮಾರು ದೂರವಿತ್ತೆಂದರೆ, ಅದರ ಪ್ರಯೋಗಕ್ಕೆ ಸ್ವತಃ

ಅವರೇ ಅಂಜಿದ್ದರು. ತುಳು ಭಾಷೆಯ ಅಸಾಧಾರಣ ಹಿಡಿತಕ್ಕೆ, ಅದರಲ್ಲಿ ಪ್ರಚಂಡ ರಂಗಚೈತನ್ಯ ತರುವ ನಿಟ್ಟಿನಲ್ಲಿ, ತುಳು ಭಾಷೆಯ ರೂಪಕ ಶಕ್ತಿಗೆ ಮನು ಇಡ್ಯಾರ ನಾಟಕಗಳಲ್ಲಿ ಅಪಾರ ಮಾದರಿಗಳಿವೆ. ಇವರ ನಾಟಕಗಳ ಕುರಿತು ವಿಸ್ತೃತವಾದ ಅಧ್ಯಯನ ನಡೆಯಬೇಕಾಗಿದೆ. ಸಮಾಜದಲ್ಲಿ ಚಾಲ್ತಿಯಲ್ಲಿರುವ ಆಚರಣೆಗಳನ್ನು ವಿಶ್ಲೇಷಣಾತ್ಮಕ ದೃಷ್ಟಿಯಿಂದ ನೋಡುವ ಬಗೆ ಇಡ್ಯಾರಿಗೆ ಸಿದ್ಧಿಸಿದ್ದು ಹೇಗೆ ಎಂಬುದರ ಕುರಿತು ಚರ್ಚೆಯಾಗಬೇಕಿದೆ. ನಾಟಕವೊಂದನ್ನು ಕಟ್ಟುವಾಗ ಅವರು ಅನುಸರಿಸಿದ ತಂತ್ರಗಳನ್ನು ಗಮನಿಸಬೇಕು. ಒಟ್ಟಿನಲ್ಲಿ ತುಳು ರಂಗಭೂಮಿಗೆ ಹೊಸತನವನ್ನು ತಂದ ಕೀರ್ತಿ ಮನು ಇಡ್ಯಾರಿಗೆ ಸಲ್ಲಬೇಕು.

**ಪರಾಮರ್ಶನ ಗ್ರಂಥಗಳು:**

1. ಮನು ಇಡ್ಯಾ, (2016), ಮಾರಿ ಗಿಡಪ್ಪುಲೆ (ತುಳು ನಾಟಕ), ಮಂಗಳೂರು: ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ.
2. ಮನು ಇಡ್ಯಾ, (1992), ತಿರ್ಸಂಕು (ತುಳು ನಾಟಕ), ಸುರತ್ಕಲ್: ಸಿಂಗಾರ ಸುರತ್ಕಲ್ ಪ್ರಕಾಶನ.
3. ಮುದ್ದು ಮೂಡುಬೆಳ್ಳೆ, (2005), ತುಳು ರಂಗಭೂಮಿ, ಮಂಗಳೂರು: ಸಾಹಿತ್ಯ ಸಂಸ್ಕೃತಿ ವೇದಿಕೆ.
4. ಮಹಾಲಿಂಗ ಭಟ್ ಕೆ., (2007), ಮುದ್ರಿತ ತುಳು ನಾಟಕಗಳು (ಸಂ: ಡಾ. ಬಿ. ಎ. ವಿವೇಕ ರೈ, 'ತುಳು ಸಾಹಿತ್ಯ ಚರಿತ್ರೆ' ಕೃತಿಯಲ್ಲಿ ), ಹಂಪಿ: ಕನ್ನಡ ವಿಶ್ವವಿದ್ಯಾಲಯ.
5. ಬೊಳುವಾರು ಐ. ಕೆ., (1989), ತುಳು ನಾಟಕೊಲು – ನಾಲ್ ಪಾತೆರೊ (ಸಂ: ಡಾ. ಕೆ. ಚಿನ್ನಪ್ಪ ಗೌಡ, 'ಪನಿಯಾರ' ಕೃತಿಯಲ್ಲಿ ), ಮಂಗಳೂರು: ತುಳುಕೂಟ (ರಿ).
6. ಮುದ್ದು ಮೂಡುಬೆಳ್ಳೆ, (2016), ತುಳು ರಂಗಭೂಮಿ (ಸಂ: ಡಾ. ಬಿ. ಎ. ವಿವೇಕ ರೈ, 'ಮಂಗಳೂರು ದರ್ಶನ – ಸಂಪುಟ 1' ಕೃತಿಯಲ್ಲಿ ), ಮಂಗಳೂರು: ಮಂಗಳೂರು ನಗರಾಭಿವೃದ್ಧಿ ಪ್ರಾಧಿಕಾರ.